


# ಫ್ರಿಂಜ್ ಕಟ್! ಪಿಕ್ಸಿ ಕಟ್!

## ಮಕ್ಕಳ ಕೇಶವಿನ್ಯಾಸಕ್ಕೆ ಹೊಸ ಟಚ್

ಥರಾವರಿ ಕೇಶವಿನ್ಯಾಸ ಮಕ್ಕಳಿಗೆ ಬಲು ಪ್ರಿಯ. ಹುಡುಗರು ಹೆಚ್ಚು ಇಷ್ಟಪಡುವ ಫ್ರಿಂಜ್ ಕಟ್, ಪಾಂಪಡೋರ್ ಕಟ್‌ಗಳು ಜನಪ್ರಿಯ. ಹಾಗೆಯೇ ಬಾಬ್‌ಕಟ್, ಬ್ಲಂಟ್ ಕಟ್, ಪಿಕ್ಸಿ ಕಟ್ ಎಂದರೆ ಹೆಣ್ಣುಮಕ್ಕಳಿಗೆ ಎಲ್ಲಿಲ್ಲದ ಪ್ರೀತಿ.

■ ಯು. ವೇಣೂರು

ಕೇಶಶೈಲಿಯಲ್ಲಿ ಈಗೀಗ ಸಣ್ಣ ಹುಡುಗರೂ ಹೆಚ್ಚು ಆಸಕ್ತಿ ತಾಳುತ್ತಿದ್ದಾರೆ. ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಹುಡುಗರ ಕೇಶಶೈಲಿಯದ್ದೇ ಮಾತುಕತೆ. ಮಕ್ಕಳು ಕ್ರಿಕೆಟ್ ಅಭಿಮಾನಿಗಳಾಗಿದ್ದರೆ ತಮ್ಮ ನೆಚ್ಚಿನ ಆಟಗಾರನ ಹೆಸರನ್ನು ಕೇಶವಿನ್ಯಾಸದಲ್ಲಿ ಬರೆಸಿಕೊಳ್ಳುವುದು ಫ್ಯಾಷನ್. ಇದೇ ರೀತಿ ತಮಗಿಷ್ಟವಾದ ಸಿನಿಮಾ ಹೀರೊ ಹೆಸರು ಅಥವಾ ಹೆಸರಿನ ಮೊದಲ ಅಕ್ಷರವನ್ನು ಬಿಡಿಸಿಕೊಳ್ಳುವುದು, ಇದನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದು, ಸ್ನೇಹಿತರಿಗೆ ಕಳಿಸಿಕೊಡುವುದು, ಆ ಮೂಲಕ ಸಂಭ್ರಮಿಸುವುದು ಮಕ್ಕಳ ಜಾಯಮಾನವಾಗಿಬಿಟ್ಟಿದೆ.

ಈಚೆಗೆ ವಿರಾಟ್ ಕೊಹ್ಲಿ, ದೋನಿ ಮುಂತಾದ ಆಟಗಾರರ ಹೆಸರಿನ, ಮೊದಲ ಅಕ್ಷರ ಇಲ್ಲವೇ ಮುಖವನ್ನು ಕೇಶವಿನ್ಯಾಸದ ಮೂಲಕ ಚಿತ್ರಿಸಿಕೊಳ್ಳುವುದು ಮಕ್ಕಳಿಗೆ ಖುಷಿಕೊಡುತ್ತಿದೆ. ಇದೇ ಈಗ ಫ್ಯಾಷನ್ ಟ್ರೆಂಡ್ ಕೂಡ ಆಗಿದೆ. ಹೆಬ್ಬುಲಿಯ ಚಿತ್ರವನ್ನೂ ತಲೆಯ ಮೇಲೆ ಚಿತ್ರಿಸಿಕೊಂಡದ್ದು ಈಚೆಗೆ ಸುದ್ದಿಯಾಗಿತ್ತು.

ಸಾಮಾನ್ಯವಾಗಿ ಮಕ್ಕಳು ಯಾವುದೇ ಕೇಶವಿನ್ಯಾಸ ಮಾಡಿಸಿಕೊಂಡರೂ ಮುದ್ದಾಗಿಯೇ ಕಾಣುತ್ತಾರೆ. ತಮ್ಮ ಮುಖಕ್ಕೆ, ವ್ಯಕ್ತಿತ್ವಕ್ಕೆ ಸರಿಹೊಂದುವ ವಿನ್ಯಾಸ ಮಾಡಿಕೊಂಡರೆ ಮಕ್ಕಳಿಗೂ, ಆ ವಿನ್ಯಾಸವನ್ನು ನೋಡುವವರಿಗೂ ಚೆನ್ನಾಗಿ ಕಾಣುತ್ತದೆ. ಆದರೆ ಅದು ಬೇರೆಯವರ ಅಪಹಾಸ್ಯಕ್ಕೆ ಕಾರಣವಾದರೆ ಮಕ್ಕಳಿಗೆ ಮಾನಸಿಕ ವೇದನೆ ಉಂಟಾಗಿ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಈ ನಿಟ್ಟಿನಲ್ಲಿ ಹೆತ್ತವರು ಎಚ್ಚರಿಕೆ ವಹಿಸಬೇಕಾದದ್ದು